ಉ) 5ನೇ ವೇತನ ಆಯೋಗದ ವರದಿಯನ್ನು ಸಂಪೂರ್ಣ ಜಾರಿಗೊಳಿಸುವಲ್ಲಿ ಸರ್ಕಾರದ ನಿಲುವೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಅ) ಆಡಳಿತ ಸುಧಾರಣಾ ಆಯೋಗದವರು ವೇತನ ಪರಿಷ್ಕರಣೆಗೆ ಸಂಬಂಧಪಟ್ಟಂತೆ ಮಾಡಿರುವ ಶಿಫಾರಸ್ಸುಗಳ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:

1) ವೇತನ ಆಯೋಗದ ರಚನೆ ಹಾಗೂ ವೇತನಗಳ ಪುನರ್ವಿಮರ್ಷೆ ಮತ್ತು ವರ್ಷಗಳಿಗೊಮ್ಮೆ ನಡೆಯಬೇಕಲ್ಲದೆ ಅದಕ್ಕೆ ಮೊದಲಲ್ಲ.

2) ರಾಜ್ಯ ಸರ್ಕಾರಿ ನೌಕರರ ವೇತನ ಮತ್ತಿತರ ಸೌಲಭ್ಯಗಳ ಮೇಲಿನ ವೆಚ್ಚವು ಇಡೀ ಸರ್ಕಾರದ ಒಟ್ಟು ವೆಚ್ಚದ ಶೇಕಡಾ 25 ರಷ್ಟು ಜಾಗರೂಕತಾ ಮಿತಿಯನ್ನು ಮೀರಬಾರದು.

ಆ) ಆಯೋಗವು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತದೆ:

* ವೇತನ ಪರಿಷ್ಕರಣೆಯಿಂದ ರಾಜ್ಯ ಖಜಾನೆಯ ಮೇಲೆ ಉಂಟಾಗುತ್ತಿರುವ ಒತ್ತಡ.
* ರಾಜ್ಯದ ಅಭಿವೃದ್ಧಿ ಯೋಜನೆಗಳಿಗೆ ಸಾಕಷ್ಟು ಸಂಪನ್ಮೂಲ ಒದಗಿಸುವ ಅಗತ್ಯತೆ.
* ವೇತನ ಮತ್ತು ನಿವೃತ್ತಿ ವೇತನದಲ್ಲಿ ಉಂಟಾಗುವ ಸರಾಸರಿ ವಾರ್ಷಿಕ ಹೆಚ್ಚಳ.
* ಕೇಂದ್ರ ಸರ್ಕಾರವು 10 ವರ್ಷಗಳಿಗೊಮ್ಮೆ ವೇತನ ಆಯೋಗ ರಚಿಸಿದರೆ ರಾಜ್ಯ ಸರ್ಕಾರವು ಐದು ವರ್ಷಗಳಿಗೊಮ್ಮೆ ರಚಿಸುತ್ತದೆ.

ಇ) ಹೌದು.

ಈ) 5ನೇ ವೇತನ ಆಯೋಗವನ್ನು ಕೆಂದ್ರ ಸರ್ಕಾರ ರಚಿಸಿದ್ದು, ಅದರ ಶಿಫಾರಸ್ಸುಗಳು ಕೇಂದ್ರ ಸರ್ಕಾರಿ ನೌಕರರಿಗೆ ಅನ್ವಯವಾಗುತ್ತವೆ. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮಾದರಿಯಲ್ಲಿ ತನ್ನ ನೌಕರರ ವೇತನ ಶ್ರೇಣಿಗಳನ್ನು ರೂಪಿಸದೆ ಅಥವಾ ಅಳವಡಿಸಿಕೊಳ್ಳದೆ ತನ್ನದೇ ಆದ ರಾಜ್ಯ ವೇತನ ಆಯೋಗ ಮತ್ತು ಅಧಿಕಾರಿ ವೇತನ ಸಮಿತಿಗಳನ್ನು ರಚಿಸಿ ಅವುಗಳ ಶಿಫಾರಸ್ಸಿನ ಅನ್ವಯ ಕಾಲಕಾಲಕ್ಕೆ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯಗಳನ್ನು ಪರಿಷ್ಕರಿಸುತ್ತಾ ಬಂದಿದೆ. ಅದರಂತೆ. ರಾಜ್ಯ ಸರ್ಕಾರವು ಅಧಿಕಾರಿ ವೇತನ ಸಮಿತಿಯನ್ನು ರಚಿಸಿ ಅದರ ಶಿಫಾರಸ್ಸಿನ ಅನ್ವಯ ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ದಿನಾಂಕ 1.4.1998 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶ ಹೊರಡಿಸಿದೆ. ಈ ಹಿನ್ನೆಲೆಯಲ್ಲಿ, ರಾಜ್ಯ ಮತ್ತು ಕೆಂದ್ರ ಸರ್ಕಾರದ ನೌಕರರ ವೇತನ/ವೇತನ ಶ್ರೇಣಿಗಳಲ್ಲಿ ವ್ಯತ್ಯಾಸವಿರುವುದು ಸ್ವಾಭಾವಿಕ.

ಉ) (ಈ) ಗೆ ನೀಡಿರುವ ಉತ್ತರದಿಂದಾಗಿ, ರಾಜ್ಯದಲ್ಲಿ ಕೇಂದ್ರ ಸರ್ಕಾರದ 5ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಸಾರಾಯಿ ಅಂಗಡಿಗಳ ಹರಾಜು

1403 (1733) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002, 2002-03 ರ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಹರಾಜು ಹಾಕಲಾದ ಸಾರಾಯಿ ಅಂಗಡಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಹರಾಜು ವಹಿಸಿಕೊಂಡವರ ಹೆಸರು ಮತ್ತು ಹರಾಜಿನ ಮೊತ್ತದ ವಿವರ ನೀಡುವುದು):

ಅ) ಈ ಮೇಲಿನ ಆರ್ಥಿಕ ವರ್ಷದಲ್ಲಿ ನಡೆಸಲಾದ ಹರಾಜಿನಂತೆ 2001-02, 2002-03 ರ ಸಾಲಿನಲ್ಲಿ (28-02-2003 ರವರೆಗೆ) ಗುತ್ತಿಗೆದಾರರಿಂದ ಸರ್ಕಾರಕ್ಕೆ ಜಮೆಯಾಗಿರುವ ಹಣ ಎಷ್ಟು? ವಿವರ ನೀಡುವುದು)

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ)

ತಾಲ್ಲೂಕು	ಸಾರಾಯಿ ಅಂಗಡಿಗಳ ಸಂಖ್ಯೆ	ಗುತ್ತಿಗೆದಾರರ ಹೆಸರು	ಹರಾಜಿನ ಮೊತ್ತ (ರೂ.ಗಳಲ್ಲಿ)
		2001- 02	
ಉಡುಪಿ	178	ಶ್ರೀ ಲೋಕೇಶ್	1,00,00,000
		ಶ್ರೀ ಹೆಚ್.ಸಿ. ಭಾನುಪ್ರಕಾಶ್	95,54,000
ಕುಂದಾಪುರ	138	ಶ್ರೀ ಕೆ.ಬಿ. ರಘುರಾಮನ್	74,52,000
ಕಾರ್ಕಳ	70	ಶ್ರೀ ಕೆ.ಎನ್. ಜಗದೀಶ್	50,00,100
		2002 - 03	
ಉಡುಪಿ	201	ಶ್ರೀ ಚಂದ್ರೇಗೌಡ	88,10,000
ಕುಂದಾಪುರ	138	ಶ್ರೀ ಕೆ.ಎನ್.ಜಗದೀಶ್	69,70,000
ಕಾರ್ಕಳ	70	ಶ್ರೀ ಕೆ.ಎನ್. ಜಗದೀಶ್	42,50,100

ಆ)

ತಾಲ್ಲೂಕು	2001 - 02 ಅಸಲು (ರೂ.ಗಳಲ್ಲಿ)	ಬಡ್ಡಿ (ರೂ.ಗಳಲ್ಲಿ
ಉಡುಪಿ	11,61,13,551	4,07,835
ಕುಂದಾಪುರ	8,18,93,000	11,33,106
ಕಾರ್ಕಳ	5,74,26,000	8,58,465
ಒಟ್ಟು	25,54,32,551	23,98,406
	2002-02 (ದಿನಾಂಕ 28-02-2003 ರ ವರೆಗೆ)	
ಉಡುಪಿ	8,03,32,101	10,26,677
ಕುಂದಾಪುರ	7,80,18,000	8,88,387
ಕಾರ್ಕಳ	4,22,01,000	4,86,997
ಒಟ್ಟು	20,05,49,101	24,02,061

ಉಡುಪಿ ಕಾರಾಗೃಹವನ್ನು ಸ್ಥಳಾಂತರಿಸುವ ಬಗ್ಗೆ

1404 (1734) ಶ್ರೀ ಸಭಾಪತಿ ಯು.ಆರ್. (ಉಡುಪಿ): ಮಾನ್ಯ ಬಂದಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-2002, 2002-03 ರ ಸಾಲಿನಲ್ಲಿ ರಾಜ್ಯದ ಕಾರಾಗೃಹಗಳ ಅಭಿವೃದ್ಧಿಗಾಗಿ ಸರಕಾರ ನಡೆಸಿದ ಕಾಮಗಾರಿಗಳು ಯಾವುವು? (ವಿವರ ನೀಡುವುದು)